# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 776 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 21/08/2026 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ (Employment Exchanges) ಹಾಗೂ ಸರ್ಕಾರದ ವಿವಿಧ ದತ್ತಾಂಶಗಳ ಪ್ರಕಾರ ನೋಂದಾಯಿತರಾಗಿರುವ ಒಟ್ಟು ನಿರುದ್ಯೋಗಿ ಪದವೀಧರರು (Graduates) ಮತ್ತು ಸ್ನಾತಕೋತ್ತರ ಪದವೀಧರ (Post Graduate) ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಪ್ರಸ್ತುತ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 33,038 ಪದವೀಧರರು ಮತ್ತು 1,579 ಸ್ನಾತಕೋತ್ತರ ಪದವೀಧರರು ನೋಂದಾಯಿಸಿಕೊಂಡಿರುತ್ತಾರೆ. ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ) | ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಯಾದ "ಯುವನಿಧಿ" ಯೋಜನೆ ಅಡಿಯಲ್ಲಿ ಇದುವರೆಗೆ ಎಷ್ಟು ಜನ ನಿರುದ್ಯೋಗಿ ಪದವೀಧರರು, ಮಾಸಿಕ ರೂ. 3000/- ನಿರುದ್ಯೋಗ ಭತ್ಯೆ ಪಡೆಯಲು ನೋಂದಾಯಿಸಿಕೊಂಡಿದ್ದಾರೆ; ಇವರಲ್ಲಿ ಪ್ರಸ್ತುತ ಭತ್ಯೆ ಪಡೆಯುತ್ತಿರುವ ಅರ್ಹ ಫಲಾನುಭವಿಗಳ ಸಂಖ್ಯೆ ಎಷ್ಟು; ಹಾಗೂ ಇದಕ್ಕಾಗಿ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು; | ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಯಾದ 'ಯುವನಿಧಿ' ಯೋಜನೆ ಅಡಿಯಲ್ಲಿ ದಿನಾಂಕ: 18-08-2026ರ ಅಂತ್ಯಕ್ಕೆ ಒಟ್ಟು 4,46,779 ಪದವೀಧರ ಅಭ್ಯರ್ಥಿಗಳು ನೋಂದಾಯಿಸಿದ್ದು, ಅವರುಗಳಲ್ಲಿ ಅರ್ಹರಾದ ಒಟ್ಟು 3,91,354 ಪದವೀಧರ ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗಿದೆ.<br><br>2026-27 ನೇ ಸಾಲಿನಲ್ಲಿ ಯುವನಿಧಿ ಯೋಜನೆಗೆ ರೂ. 372.40 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. |
| ಇ) | ಯುವನಿಧಿ ಯೋಜನೆಯಡಿ ಭತ್ಯೆ ಪಡೆಯುತ್ತಿರುವ ಪದವೀಧರರಿಗೆ ಕೇವಲ ಆರ್ಥಿಕ ಸಹಾಯ ಸಹಾಯಧನ ನೀಡುವುದಲ್ಲದೆ ಅವರಿಗೆ ಉದ್ಯೋಗ ಮಾರುಕಟ್ಟೆಗೆ ಪೂರಕವಾದ ಕೌಶಲ್ಯ ಆಧಾರಿತ ತರಬೇತಿ (Skill Development Training) ನೀಡಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು; ತರಬೇತಿ ಪಡೆದ ಎಷ್ಟು ಯುವಕರಿಗೆ ಉದ್ಯೋಗಾವಕಾಶ ದೊರೆತಿದೆ; | ಯುವನಿಧಿ ಪ್ಲಸ್ ಉಪ ಕ್ರಮದಡಿಯಲ್ಲಿ ಯುವನಿಧಿ ಯೋಜನೆಯಡಿ ಭತ್ಯೆ ಪಡೆಯುತ್ತಿರುವ ಪದವೀಧರರಿಗೆ ಉದ್ಯೋಗ ಮಾರುಕಟ್ಟೆಗೆ ಪೂರಕವಾದ ಕೌಶಲ್ಯ ಆಧಾರಿತ ತರಬೇತಿ (Skill Development Training) ಯನ್ನು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ನೀಡಲಾಗುತ್ತಿದೆ. |
| ಈ) | ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಪದವೀಧರ ನಿರುದ್ಯೋಗ ಸಮಸ್ಯೆಗಳನ್ನು ತಡೆಗಟ್ಟಲು ಖಾಸಗಿ ವಲಯದ ಸಹಭಾಗಿತ್ವದಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಲು ಹಾಗೂ ಸರ್ಕಾರಿ ವಲಯದಲ್ಲಿ ಖಾಲಿ ಇರುವ ವಿವಿಧ ಪದವಿ ದರ್ಜೆ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಹಮ್ಮಿಕೊಂಡಿರುವ ತುರ್ತು ಕ್ರಮಗಳೇನು? | ಇಲಾಖೆ ವತಿಯಿಂದ 2025-26 ನೇ ಸಾಲಿನಲ್ಲಿ ರಾಜ್ಯದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಪದವೀಧರ ಅಭ್ಯರ್ಥಿಗಳನ್ನು ಒಳಗೊಂಡಂತೆ ನಿರುದ್ಯೋಗಿ ಅಭ್ಯರ್ಥಿಗಳಿಗೆ ಖಾಸಗಿ ವಲಯದ ಸಹಭಾಗಿತ್ವದಲ್ಲಿ 583 ಮಿನಿ ಉದ್ಯೋಗ ಮೇಳ/ನೇರ ಸಂದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಆ ಮೂಲಕ 10,616 ಅಭ್ಯರ್ಥಿಗಳಿಗೆ ಉದ್ಯೋಗ ಆಹ್ವಾನ ಪತ್ರ ನೀಡಲಾಗಿರುತ್ತದೆ.<br><br>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ನೇರ ನೇಮಕಾತಿಗೊಳಪಡುವ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಮುಂದುವರೆದು, ಉಳಿಕೆ ಮೂಲ ವೃಂದಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಗೆ ಒಳಪಡುವ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯ ಸಹಮತಿ ಪಡೆಯಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಕೌಉಜೀಇ 61 ಕೈತಪ್ರ 2026**

(ಡಾ. ಶರಣಪ್ರಕಾಶ ಆರ್ ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

## ಅನುಬಂಧ

### ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ಪದವೀಧರ ಮತ್ತು ಸ್ನಾತಕೋತ್ತರ ಪದವೀಧರ ಅಭ್ಯರ್ಥಿಗಳ ಜಿಲ್ಲಾವಾರು ವಿವರ

| ಕ್ರ.ಸಂ. | ಜಿಲ್ಲೆ | ಪದವೀಧರರು | ಸ್ನಾತಕೋತ್ತರ ಪದವೀಧರರು |
|---|---|---|---|
| 1 | ಬಾಗಲಕೋಟೆ | 488 | - |
| 2 | ಬಳ್ಳಾರಿ | 1,937 | - |
| 3 | ವಿಜಯನಗರ | | - |
| 4 | ಬೆಳಗಾವಿ | 846 | - |
| 5 | ಬೆಂಗಳೂರು ಗ್ರಾಮಾಂತರ | 9,273 | 1,579 |
| 6 | ಬೆಂಗಳೂರು ನಗರ | | |
| 7 | ಬೀದರ | 2,444 | - |
| 8 | ಚಾಮರಾಜನಗರ | 739 | - |
| 9 | ಚಿಕ್ಕಬಳ್ಳಾಪುರ | 169 | - |
| 10 | ಚಿಕ್ಕಮಗಳೂರು | 370 | - |
| 11 | ಚಿತ್ರದುರ್ಗ | 293 | - |
| 12 | ದಕ್ಷಿಣ ಕನ್ನಡ | 2,592 | - |
| 13 | ದಾವಣಗೆರೆ | 707 | - |
| 14 | ಧಾರವಾಡ | 442 | - |
| 15 | ಗದಗ | 934 | - |
| 16 | ಹಾಸನ | 454 | - |
| 17 | ಹಾವೇರಿ | 865 | - |
| 18 | ಕಲಬುರಗಿ | 1,487 | - |
| 19 | ಕೊಡಗು | 247 | - |
| 20 | ಕೋಲಾರ | 506 | - |
| 21 | ಕೊಪ್ಪಳ | 724 | - |
| 22 | ಮಂಡ್ಯ | 608 | - |
| 23 | ಮೈಸೂರು | 1,041 | - |
| 24 | ರಾಯಚೂರು | 310 | - |
| 25 | ರಾಮನಗರ | 473 | - |
| 26 | ಶಿವಮೊಗ್ಗ | 260 | - |
| 27 | ತುಮಕೂರು | 1,524 | - |
| 28 | ಉಡುಪಿ | 1,000 | - |
| 29 | ಉತ್ತರಕನ್ನಡ | 1,192 | - |
| 30 | ವಿಜಯಪುರ | 644 | - |
| 31 | ಯಾದಗಿರಿ | 469 | - |
| | **ಒಟ್ಟು** | **33,038** | **1,579** |

ನಿರ್ದೇಶಕರು,
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ.